O.S. NO. 100/2022
PW -1 .
Dated 20-08-2024.

ಸಾಕ್ಷಿಯನ್ನು ಈ ದಿನ ದಿನಾಂಕ 20-08- 2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರವಾಗಿ ಶ್ರೀ ಎಸ್ ಎಸ್ ಎ ವಕೀಲರಿಂದಃ

2015 ರಲ್ಲಿ ಮನೆಗಳ ಕುರಿತು ನಮ್ಮ ಮತ್ತು ಪ್ರತಿವಾದಿಗಳ ಮಧ್ಯೆ ವಾಟ್ನಿ ಆಗಿರುತ್ತದೆ. ಸದರಿ ವಾಟ್ನಿ ಆದ ತಾರೀಖು, ತಿಂಗಳು ನನಗೆ ಹೇಳಲು ಬರುವುದಿಲ್ಲ. ಸದರಿ ವಾಟ್ನಿ ಕುರಿತು ಯಾವುದೇ ಲಿಖಿತ ದಾಖಲೆಗಳು ಆಗಿರುವುದಿಲ್ಲ. ದಾವಾ ಜಮಿನುಗಳ ವಾಟ್ನಿ ಸಂದರ್ಭದಲ್ಲಿ ನಾನು ವಯಕ್ತಿಕವಾಗಿ ಭಾಗವಹಿಸಿರುವುದಿಲ್ಲ. ನನ್ನ ತಂದೆಯವರು ಭಾಗವಹಿಸಿರುತ್ತಾರೆ. ವಾಟ್ನಿ ಪೂರ್ವ ವಾಟ್ನಿ ಮಾಡುತಕತೆ ಸಂದರ್ಬದಲ್ಲಿ ದಾವಾ ಜಮಿನುಗಳ ಸರ್ವೆ ರೆವ್ಹಿನ್ಯು ಸ್ಕೆಚ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರೆವ್ಹಿನ್ಯು ಸ್ಕೆಚ ಮಾಡಬೇಕಾದರೆ ಹೊಲಕ್ಕೆ ಸರ್ವೆರ ಬಂದು ಅಳತೆ ಮಾಡಿದ ನಂತರ ರೆವ್ಹಿನ್ಯು ಸ್ಕೆಚ ತಯಾರಿಸುತ್ತಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಯಾವುದೇ ಸರ್ವೆರರವರು ದಾವಾ ಜಮಿನುಗಳಿಗೆ ಭೇಟಿ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸರ್ವೆರರವರು ದಾವಾ ಜಮಿನುಗಳಿವಿಗೆ ಭೇಟಿ ನೀಡಿ ಸರ್ವೆ ಅಳತೆ ಕಾರ್ಯ ಮುಗಿಸಿ ನನ್ನ ತಂದೆ ಮತ್ತು ಉಳಿದ ವಾಟ್ನಿ ಪತ್ರದ ಪಕ್ಷಗಾರರ ಸಹಿ ಪಡೆದು ಹೊಗಿರುತ್ತಾರೆ ಎಂದರೆ ಸರಿಯಲ್ಲ. ವಾಟ್ನಿ ಪತ್ರ ನೊಂದಣಿ ಆಗುವ ಸಂದರ್ಬದಲ್ಲಿ ಸಬ ರಜಿಸ್ಟರ ಕಚೇರಿಗೆ ನಾನು ನನ್ನ ತಂದೆ ಜೊತೆ ಹೊಗಿರಲಿಲ್ಲ ನನ್ನ ತಂದೆ ಮಾತ್ರ ಹೊಗಿದ್ದರು. ಸದರಿ ವಾಟ್ನಿ ಪತ್ರವನ್ನು ಯಾರು ತಯಾರಿಸಿದರು ಮತ್ತು ಅದನ್ನು ತಯಾರಿಸಲು ಯಾರು ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ನನಗೆ ವಯಕ್ತಿಕವಾಗಿ ಗೊತ್ತಿರುವುದಿಲ್ಲ ಎಂದರೆ ನಿಜ. ಸದರಿ ವಾಟ್ನಿ ಪತ್ರವನ್ನು ನನ್ನ ತಂದೆ ಮತ್ತು ಸದರಿ ವಾಟ್ನಿ ಪತ್ರದ ಎಲ್ಲ ಪಕ್ಷಗಾರರು ಸೇರಿ ಮಾಹಿತಿ ನೀಡಿ ಬರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಟ್ನಿ ಪತ್ರದ ಪಕ್ಷಗಾರರೆಲ್ಲರೂ ನೀಡಿದ

ಮಾಹಿತಿಯಂತೆ ಸಂತೊಷ ಕುಡಸೊಮಣ್ಣವರ ಎಂಬ ಬಾಂಡ ಬರಹಗಾರರು ತಯಾರಿಸಿ ಅದನ್ನು ಎಲ್ಲ ವಾಟ್ನಿ ಪತ್ರದ ಪಕ್ಷಗಾರರರಿಗೆ ಓದಿ ತಿಳಿಸಿರುತ್ತಾರೆ ಎಂದರೆ ನನ್ನ ತಂದೆಗೆ ಓದು ಬರಹ ಬರುವುದಿಲ್ಲ, ಹೆಬ್ಬಟ್ಟು ಹಾಕುವವರು ಇರುತ್ತಾರೆ ಎಂದು ನುಡಿದಿರುತ್ತಾರೆ. ಸಬ ರಜಿಸ್ಟರ ಸಮಕ್ಷಮ ಸಹ ಸದರಿ ವಾಟ್ನಿ ಪತ್ರವನ್ನು ನನ್ನ ತಂದೆಗೆ ಮತ್ತು ಉಳಿದ ವಾಟ್ನಿ ಪತ್ರದ ಪಕ್ಷಗಾರರರಿಗೆ ಓದಿ ತಿಳಿಸಿದ್ದರಿಂದ ಅವರು ಒಪ್ಪಿಕೊಂಡು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆಗೆ ಕಣ್ಣು ಕಾಣುವುದಿಲ್ಲ, ಓದು ಬರಹ ಬರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆಗೆ ಕಣ್ಣು ಕಾಣುವುದಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ಪ್ರಸ್ತುತ ದಾವೆಯ ವಾದ ಪತ್ರವನ್ನು ತಾವೇ ಸ್ವತಃ ಮಾಹಿತಿ ನೀಡಿ ಓದಿಸಿ ತಿಳಿದುಕೊಂಡು ಅದರಲ್ಲಿ ಹೆಬ್ಬಟ್ಟಿನ ಗುರುತು ಹಾಕಿರುತ್ತಾರೆ ಎಂದರೆ ಸರಿ. ವಾಟ್ನಿ ಪತ್ರದ ವಸ್ತು ವಿಷಯದ ಬಗ್ಗೆ ನನಗೆ ವಯಕ್ತಿಕವಾಗಿ ಮಾಹಿತಿ ಇಲ್ಲದಿದ್ದರೂ ಸಹ ಸದರ ವಾಟ್ನಿ ಪತ್ರ ಮೋಸದಿಂದ ತಯಾರಿಸಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಕ್ಕು ಬಿಟ್ಟ ಪತ್ರ ಮಾಡುವ ಸಂದರ್ಬದಲ್ಲಿ ಸಹ ನಾನು ವಯಕ್ತಿಕವಾಗಿ ಹಾಜರು ಇರಲಿಲ್ಲ ಎಂದರೆ ನಿಜ.

ರುದ್ರಪ್ಪ ಸತ್ತಿಗೇರಿ ಮತ್ತು ಪರಪ್ಪ ಚಿನಗುಡಿ ಮತ್ತು ನಮ್ಮ ನಡುವೆ ಯಾವುದೇ ವಯಕ್ತಿಕ ದ್ವೇಷ ಇರುವುದಿಲ್ಲ. ವಾಟ್ನಿ ಪತ್ರದ ಪ್ರಕಾರ ನನ್ನ ತಂದೆಯವರು ಕೆಲಮೊಂದು ಆಸ್ತಿಗಳ ಕುರಿತು ದಾಖಲೆಗಳಲ್ಲಿ ತಮ್ಮ ಹೆಸರು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2015 ರಲ್ಲಿ ನನ್ನ ತಂದೆ ಮತ್ತು ಪ್ರತಿವಾದಿಗಳ ಮದ್ಯೆ ನೊಂದಾಯಿತ ವಾಟ್ನಿ ಪತ್ರ ಆದ ವಿಷಯ ಮತ್ತು ಸದರಿ ವಾಟ್ನಿ ಪತ್ರದ ಪಪ್ರಕಾರ ವಾಟ್ನಿ ಪತ್ರದ ಪಕ್ಷಗಾರರು ನಡದು ಕೊಂಡಿರುವ ವಿಷಯ ನನಗೆ ಗೊತ್ತಿದ್ದರು ಸಹ ನಾನು ಅದಕ್ಕೆ ವ್ಯತಿರಿಕ್ತವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ವಯಕ್ತಿಕ ದುಡಿಮೆಯಿಂದ ಗಳಿಸಿರುವ ಆಸ್ತಿಯನ್ನು ಇತ್ತಿ ಹಾಕಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ.

O.S. NO. 100/2022

PW -1 .

Dated 20-08-2024.

ಪಾಟಿ ಸವಾಲುಃ 5 ಮತ್ತು 6 ನೇ ಪ್ರತಿವಾದಿಗಳ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೊರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.